# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಸದಸ್ಯರ ಹೆಸರು | ಶ್ರೀ ಸುನೀಲ್‌ಗೌಡ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 87(687) |
| ಉತ್ತರಿಸಬೇಕಾದ ದಿನಾಂಕ | 21.02.2023 |
| ಉತ್ತರಿಸಬೇಕಾದವರು | ಮಾನ್ಯ ನಗರಾಭಿವೃದ್ಧಿ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ವಿಜಯಪುರ ಜಿಲ್ಲೆಯ ರಂಭಾಪುರ ಮತ್ತು ಕಸಬಾ ಗ್ರಾಮಗಳಲ್ಲಿ 50:50 ರ ಅನುಪಾತದಲ್ಲಿ ರೈತರ ಸಹಭಾಗಿತ್ವದಲ್ಲಿ ವಸತಿ ಯೋಜನೆ ರೂಪಿಸುವ ಪ್ರಸ್ತಾವನೆಯು ವಿಳಂಬವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ವಿಳಂಬವಾಗಿರುವುದಕ್ಕೆ ಕಾರಣಗಳೇನು; | ವಿಜಯಪುರ ಜಿಲ್ಲೆಯ ರಂಭಾಪುರ ಮತ್ತು ಕಸಬಾ ಗ್ರಾಮಗಳಲ್ಲಿ 50:50 ರ ಅನುಪಾತದಲ್ಲಿ ರೈತರ ಸಹಭಾಗಿತ್ವದಲ್ಲಿ ವಸತಿ ಯೋಜನೆ ರೂಪಿಸುವ ಪ್ರಸ್ತಾವನೆಯು ವಿಳಂಬವಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.<br><br>ಕೆಲವು ರೈತರು ಮಾನ್ಯ ನ್ಯಾಯಾಲಯದ ಆದೇಶ ಪಡೆದು ಬಿನ್ ಶೇತ್ಕಿ ಮಾಡಿಸಿಕೊಂಡಿರುತ್ತಾರೆ. ಕೆಲವು ರೈತರು ಜಮೀನು ಬಿಟ್ಟುಕೊಡಲು ಸಹಮತಿ ನೀಡದೇ ಇರುವುದರಿಂದ ಹಾಗೂ ಪ್ರಾಧಿಕಾರವು ಆರ್ಥಿಕವಾಗಿ ಸದೃಢವಾಗಿಲ್ಲವೆಂದು ಪ್ರಾಧಿಕಾರದ ಸಭೆಯ ತೀರ್ಮಾನದಂತೆ ಸದರಿ ಯೋಜನೆಯನ್ನು ಕೈಬಿಡುವಂತೆ ಕೋರಿ ಪ್ರಾಧಿಕಾರದಿಂದ ಸರ್ಕಾರಕ್ಕೆ ಪ್ರಸ್ತಾಪಿಸಲಾಗಿತ್ತು.<br><br>ಅದರಂತೆ ಪ್ರಾಧಿಕಾರದ ಪ್ರಸ್ತಾವನೆಯನ್ನು ಪರಿಶೀಲಿಸಿ, ಪ್ರಸ್ತಾಪಿತ ಯೋಜನೆಯನ್ನು ಕೈಗೊಳ್ಳುವ ಕುರಿತು ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿನ ಸಿವಿಲ್ ಅಪೀಲು ಸಂಖ್ಯೆ:3600/2011ಕ್ಕೆ ಸಂಬಂಧಿಸಿದಂತೆ ಮಾನ್ಯ ನ್ಯಾಯಾಲಯವು ನೀಡಿರುವ ತೀರ್ಪಿನಂತೆ ಅಂಶವಾರು ಪರಿಶೀಲಿಸಿ ನಿಯಮಾನುಸಾರ ಕ್ರಮ ಕೈಗೊಳ್ಳುವಂತೆ ಸರ್ಕಾರದಿಂದ ಪ್ರಾಧಿಕಾರಕ್ಕೆ ದಿನಾಂಕ:19.03.2021 ರಂದು ನಿರ್ದೇಶನ ನೀಡಲಾಗಿರುತ್ತದೆ (ಪ್ರತಿ ಲಗತ್ತಿಸಿದೆ).<br><br>ಮುಂದುವರೆದು, ಪ್ರಾಧಿಕಾರವು ಮಾನ್ಯ ಸರ್ವೋಚ್ಚ ನ್ಯಾಯಾಲಯದ ಸಿವಿಲ್ ಅಪೀಲು ಸಂಖ್ಯೆ:3600/2011ರಲ್ಲಿ ಸಂಬಂಧಿಸಿದಂತೆ ನೀಡಿರುವ ಆದೇಶವು ರೈತರ ಸಹಭಾಗಿತ್ವದಲ್ಲಿ |
| ಆ) | ಪ್ರಸ್ತಾಪಿತ ಯೋಜನೆಯನ್ನು ಮುಂದುವರಿಸಲಾಗುವುದೇ ಅಥವಾ ರದ್ದುಪಡಿಸಲಾಗುವುದೇ ಸರ್ಕಾರದ ಸ್ಪಷ್ಟ ನಿಲುವೇನು? (ವಿವರ ನೀಡುವುದು) | |

| | | |
|---|---|---|
| ಇ) | ಯಾವ ಕಾಲಮಿತಿಯೊಳಗೆ ಈ ಯೋಜನೆಯ ಕುರಿತು ಸರ್ಕಾರದ ಕ್ರಮ ಕೈಗೊಳ್ಳುವುದು; | ಕೈಗೊಳ್ಳುವ ವಸತಿ ಯೋಜನೆಗೆ ಅನ್ವಯಿಸುವುದಿಲ್ಲವೆಂದು ಪ್ರಾಧಿಕಾರದ ವಕೀಲರು ಅಭಿಪ್ರಾಯಿಸಿರುವ ಮೇರೆಗೆ ಪ್ರಸ್ತಾಪಿತ ವಸತಿ ಯೋಜನೆಯನ್ನು ರದ್ದುಪಡಿಸಬೇಕೇ ಅಥವಾ ಮುಂದುವರಿಸಬೇಕೇ ಎಂಬುದರ ಬಗ್ಗೆ ಪ್ರಾಧಿಕಾರದಿಂದ ಸರ್ಕಾರದ ಸ್ಪಷ್ಟೀಕರಣ ಕೋರಲಾಗಿರುತ್ತದೆ. ವಿಜಯಪುರ ಜಿಲ್ಲೆಯ ರಂಭಾಪುರ ಮತ್ತು ಕಸಬಾ ಗ್ರಾಮಗಳಲ್ಲಿ 50:50 ರ ಅನುಪಾತದಲ್ಲಿ ರೈತರ ಸಹಭಾಗಿತ್ವದಲ್ಲಿ ವಸತಿ ಯೋಜನೆ ರೂಪಿಸುವ ಕುರಿತ ಪ್ರಸ್ತಾವನೆಯು ಸರ್ಕಾರದಲ್ಲಿ ಪರಿಶೀಲನಾ ಹಂತದಲ್ಲಿದ್ದು, ಈ ಕುರಿತು ಪರಿಶೀಲನೆಯ ನಂತರ ಪ್ರಾಧಿಕಾರಕ್ಕೆ ಸೂಕ್ತ ನಿರ್ದೇಶನ ನೀಡಲಾಗುವುದು. |
| ಈ) | ಈ ಯೋಜನೆಯನ್ನು ಮುಂದುವರಿಸಲು ಸರ್ಕಾರಕ್ಕಿರುವ ಅಡೆತಡೆಗಳಾದರೂ ಏನು; ಯಾವ ಕಾರಣಕ್ಕೆ ವಿಳಂಭ ಮಾಡಲಾಗುತ್ತಿದೆ? | |

ಕಡತ ಸಂಖ್ಯೆ: ನಅಇ 08 ಎಲ್‌ಸಿಕ್ಯೂ 2023 (ಇ)

(ಬಿ.ಎ.ಬಸವರಾಜ)
ನಗರಾಭಿವೃದ್ಧಿ ಸಚಿವರು

(ಬಿ.ಎ. ಬಸವರಾಜ)
ನಗರಾಭಿವೃದ್ಧಿ ಸಚಿವರು

(214)

**ಕರ್ನಾಟಕ ಸರ್ಕಾರ**

ಸಂಖ್ಯೆ: ನಅಇ 457 ಬೆಮಪ್ರಾ 2015

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸ ಸೌಧ
ಬೆಂಗಳೂರು, ದಿನಾಂಕ:19.03.2021

**ಇವರಿಂದ:**
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ,
ವಿಕಾಸ ಸೌಧ, ಬೆಂಗಳೂರು.

**ಇವರಿಗೆ:**
ಆಯುಕ್ತರು,
ವಿಜಯಪುರ ನಗರಾಭಿವೃದ್ಧಿ ಪ್ರಾಧಿಕಾರ,
ವಿಜಯಪುರ.

**ಮಾನ್ಯರೆ,**

ವಿಷಯ: ರಂಭಾಪೂರ ಮತ್ತು ಕಸಬಾ ಗ್ರಾಮಗಳಲ್ಲಿ 50:50 ಅನುಪಾತದಲ್ಲಿ ರೈತರ ಸಹಭಾಗಿತ್ವದಲ್ಲಿ ವಸತಿ ಯೋಜನೆ ರೂಪಿಸುವ ಬಗ್ಗೆ.

ಉಲ್ಲೇಖ:1. ತಮ್ಮ ತಮ್ಮಪತ್ರ ಸಂಖ್ಯೆ:ನಪ್ರಾವಿ/ಯೋಜನೆ/2020-21/1053, ದಿ:22.02.2021.
2. ತಮ್ಮ ಅ.ಸ.ಪತ್ರ, ಸಂ:ನಪ್ರಾವಿ/50:50 ರೈ.ಸ.ಯೋ/2018-19/448, ದಿ:23.07.2019.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1)ರ ಪತ್ರದ ಕಡೆಗೆ ತಮ್ಮ ಗಮನ ಸೆಳೆಯಲಾಗಿದೆ. ದಿನಾಂಕ:08.02.2021ರ ವಿಷಯ ಸಂಖ್ಯೆ:13ರ ನಿರ್ಣಯದ ಮೇರೆಗೆ ಸರ್ಕಾರದ ಮಾರ್ಗದರ್ಶನ ಕೋರಿರುತ್ತೀರಿ.

ಅದರಂತೆ, ಪರಿಶೀಲಿಸಲಾಗಿ, ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿನ ಸಿವಿಲ್ ಅಪೀಲು ಸಂಖ್ಯೆ: 3600/2011 ಕ್ಕೆ ಸಂಬಂಧಿಸಿದಂತೆ ಮಾನ್ಯ ನ್ಯಾಯಾಲಯವು ನೀಡಿರುವ ತೀರ್ಪಿನ ಕಂಡಿಕೆ 38 ರ ಉದೃತ ಭಾಗ ಈ ಕೆಳಕಂಡಂತಿರುತ್ತದೆ.

"We are the considered view that the government should refrain from di-notifying or dropping any land being acquired for the formation of a layout, under Section 48 of the L.A Act or under any other law. The courts should also be very strict while considering the plea of the landowners seeking di-notification of the lands which are being acquired or quashing of the notification on the ground of lapsing of the scheme or on any other grounds in respect of the acquired lands for the formation of the layout. It has to be kept in mind that private interest always stands subordinated to the public good".

ಅದರಂತೆ, ಪ್ರಸ್ತಾಪಿತ ವಸತಿ ಯೋಜನೆಗೆ ಪ್ರಾಧಿಕಾರವು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ, 1987 ರ ಕಲಂ 17(1) ರನ್ವಯ ಪ್ರಾಥಮಿಕ ಅಧಿಸೂಚನೆಯನ್ನು ದಿನಾಂಕ:13.08.2010 ರಂದು ಹೊರಡಿಸಿರುವುದರಿಂದ, ಸದರಿ ಯೋಜನೆಯನ್ನು ಪ್ರಾಧಿಕಾರವು ಈ ಹಿಂದೆ ಸ್ವಇಚ್ಛೆಯಿಂದ ಕೈಗೊಳ್ಳಲು ಸಲ್ಲಿಸಿದ್ದುದರಿಂದ, ಮಾನ್ಯ ಸರ್ವೋಚ್ಛ ನ್ಯಾಯಾಲಯದ ತೀರ್ಪಿನಂತೆ ಅಂಶವಾರು ಪರಿಶೀಲಿಸಿ ಈ ಕುರಿತು ನಿಯಮಾನುಸಾರ ಮುಂದಿನ ಸೂಕ್ತ ಕ್ರಮ ಕೈಗೊಳ್ಳುವಂತೆ ತಮ್ಮನ್ನು ಕೋರಲು ನಿರ್ದೇಶಿತಳಾಗಿದ್ದೇನೆ.

ತಮ್ಮ ನಂಬುಗೆಯ,

(ಲತಾ.ಕೆ)
ಸರ್ಕಾರದ ಅಧೀನ ಕಾರ್ಯದರ್ಶಿ,
(ಅಭಿವೃದ್ಧಿ ಪ್ರಾಧಿಕಾರ ಮತ್ತು ನಯೋಸೇ)
ನಗರಾಭಿವೃದ್ಧಿ ಇಲಾಖೆ.